# ನಿದ್ದೆಯಿಲ್ಲದ ರಾತ್ರಿಗಳು

ಅಕ್ಬರ್ ತನ್ನ ರಾಜ್ಯದ ಬಗ್ಗೆ ಹಗಲು ರಾತ್ರಿ ಎನ್ನದೇ ಚಿಂತಿಸುತ್ತಾ ಇದ್ದಾಗ ಅವನಿಗೆ ನಿದ್ದೆಯೇ ಬಾರದಂತೆ ಆಯಿತು. ಕಾಲಕ್ರಮೇಣ ನಿದ್ದೆಯಿಲ್ಲದೆ ಅವನು ಅನಾರೋಗ್ಯಕ್ಕೆ ತುತ್ತಾದ. ಅನೇಕ ವೈದ್ಯರು ಬಂದು ಪರೀಕ್ಷಿಸಿದರೂ ಅವನಲ್ಲಿ ಚೇತರಿಕೆ ಕಾಣಲಿಲ್ಲ.

ಹೀಗಿರುವಾಗ ಒಂದು ದಿನ ಪರ್ಷಿಯಾ ದೇಶದ ವೈದ್ಯರೊಬ್ಬರು ಬಂದು ಅಕ್ಬರ್‌ನನ್ನು ಪರೀಕ್ಷಿಸಿ ‘ಮಹಾರಾಜ, ನಿಮಗೆ ನಿದ್ದೆ ಬರದಂತಹ ಕಾಯಿಲೆಗೆ ಔಷಧಿ ಒಂದಿದೆ. ಅದು ಏನೆಂದರೆ, ಪ್ರತಿದಿನ ನೀವು ಮಲಗುವ ಮೊದಲು ಯಾವುದಾದರೂ ಒಂದು ಕಥೆಯನ್ನು ಕೇಳಿ ಮಲಗಿ. ಹಾಗೆ ಮಾಡುವುದರಿಂದ ನಿಮ್ಮ ಚಿಂತೆಯು ದೂರವಾಗಿ ನಿದ್ದೆಯೂ ಬರುತ್ತದೆ’ ಎಂದನು.

ಆಗ ಅಕ್ಬರ್ ಅಲ್ಲಿಯೇ ಇದ್ದ ಬೀರಬಲ್ಲನಲ್ಲಿ ‘ನನಗೆ ಯಾರು ಮಲಗುವ ಮೊದಲು ಕಥೆಯನ್ನು ಹೇಳುತ್ತಾರೆ?’ ಎಂದನು. ಅದಕ್ಕೆ ಬೀರಬಲ್, ‘ಮಹಾರಾಜ, ಚಿಂತಿಸಬೇಡಿ. ಪ್ರತಿದಿನ ಯಾರಾದರೂ ಸಭೀಕರು ನಿಮ್ಮಲ್ಲಿಗೆ ಬಂದು ಕಥೆಯನ್ನು ಹೇಳುತ್ತಾರೆ’ ಎಂದು ಹೇಳಿದನು.

‘ಬೀರಬಲ್, ನೀನು ಹೇಳುವುದು ಸರಿಯಾಗಿದೆ. ಈಗಲೇ ಆಜ್ಞೆಯನ್ನು ಹೊರಡಿಸು’ ಎಂದನು. ರಾಜಾಜ್ಞೆಯಂತೆ ಪ್ರತಿ ರಾತ್ರಿಯೂ ಸಭೀಕನೊಬ್ಬ ಅರಮನೆಗೆ ಬಂದು ಕಥೆಯನ್ನು ಹೇಳುತ್ತಿದ್ದ. ಆದರೆ ಅಕ್ಬರನಿಗೆ ಅವರ ಕಥೆಯನ್ನು ಕೇಳಿ ನಿದ್ದೆ ಬರುತ್ತಿರಲಿಲ್ಲ. ಆ ಸಭೀಕರೆಲ್ಲರಿಗೂ ರಾಜನಿಗೆ ಕಥೆಯನ್ನು ಹೇಳೀ ಹೇಳಿ ಆಯಾಸವಾಗುತ್ತಿತ್ತು. ಅಕ್ಬರ್ ಅವರಲ್ಲಿ ಕಥೆಯನ್ನು ಕೇಳುತ್ತಾ ‘ಮುಂದೇನಾಯಿತು... ನಂತರ ಏನಾಯ್ತು ?’ ಹೀಗೆ ಪ್ರಶ್ನೆ ಮೇಲೆ ಪ್ರಶ್ನೆ ಹಾಕುತ್ತಿದ್ದ. ಕೊನೆಗೆ ಕಥೆ ಹೇಳುವವರಿಗೇ ನಿದ್ದೆ ಬಂದುಬಿಡುತ್ತಿತ್ತು.

ರಾಜ್ಯದ ಸಭೀಕರರೆಲ್ಲರ ಸರದಿ ಮುಗಿದ ನಂತರ ಬೀರಬಲ್ಲನ ಸರದಿ ಬಂದಿತು. ಬೀರಬಲ್ಲನು ಕಥೆಯನ್ನು ಹೇಳಲು ಪ್ರಾರಂಭಿಸಿದ. ‘ಒಂದಾನೊಂದು ಕಾಲದಲ್ಲಿ ಒಂದು ಕಾಡಿನಲ್ಲಿ’

ಆಗ ಅಕ್ಬರ್ ‘ಅನಂತರ, ಏನಾಯ್ತು?’ ಎಂದು ಕೇಳಿದನು.

‘ಅಲ್ಲೊಂದು ಚಿಕ್ಕ ಗುಡಿಸಲಿತ್ತು. ಆ ಗುಡಿಸಲಿನಲ್ಲಿ ಒಬ್ಬ ರೈತ ವಾಸವಾಗಿದ್ದ. ರೈತನ ಸಂಸಾರ ದೊಡ್ಡದಾಗಿತ್ತು.’

‘ಮುಂದೇನಾಯಿತು, ಬೇಗ ಹೇಳು’ ಎಂದು ಅಕ್ಬರ್ ಕಾತುರದಿಂದ ಕೇಳಿದನು.

‘ರೈತನು ತನ್ನ ಜಮೀನಿನಲ್ಲಿ ಉತ್ತಿಬಿತ್ತಿ ಬೆಳೆಯನ್ನು ಬೆಳೆದನು. ಬಂದ ಪೈರನ್ನು ಕತ್ತರಿಸಿ ಕಾಳುಗಳನ್ನು ತಂದು ತನ್ನ ಗುಡಿಸಿನಲ್ಲಿ ಸಂಗ್ರಹಿಸಿಟ್ಟನು.’

‘ನಂತರ ಏನಾಯ್ತು?’

‘ನಂತರ ರೈತನಿಗೆ ಒಂದು ಸಮಸ್ಯೆ ಎದುರಾಯಿತು. ಅವನು ಸಂಗ್ರಹಿಸಿಟ್ಟ ಕಾಳುಗಳನ್ನು ಹಕ್ಕಿಗಳು ಗುಡಿಸಲಿನ ಒಳಗೆ ಬಂದು ಎತ್ತಿಕೊಂಡು ಹೋಗುತ್ತಿದ್ದವು’.

‘ಮುಂದೆ ಏನು ಮಾಡಿದ?’ ಎಂದು ಕಥೆಯನ್ನು ಹೇಳುವಾಗ ಮಧ್ಯದಲ್ಲಿ ಅಕ್ಬರ್ ಮತ್ತೆ ಬೀರಬಲ್ಲನನ್ನು ಕೇಳಿದ.

ಅಕ್ಬರನ ಪ್ರಶ್ನೆಗೆ ಉತ್ತರಿಸಿ ಉತ್ತರಿಸಿ ಬೀರಬಲ್ಲನಿಗೆ ಆಯಾಸವಾಗಿ ಬೇಸರ ಆಗತೊಡಗಿತು. ರಾಜನ ಸಮಸ್ಯೆಯನ್ನು ಬಗೆಹರಿಸುವುದು ಹೇಗೆಂದುಕೊಂಡು ಕಥೆಯನ್ನು ಮುಂದುವರಿಸಿದ.

‘ರೈತನು ತನಗೆ ಹಕ್ಕಿಗಳಿಂದ ಆಗುತ್ತಿದ್ದ ಸಮಸ್ಯೆಯನ್ನು ಹೇಗಾದರೂ ಮಾಡಿ. ಬಗೆಹರಿಸಬೇಕೆಂದು ಕೊಂಡನು.’

ಆಗ ಅಕ್ಬರ್ ‘ರೈತನು ಮುಂದೆ ಏನು ಮಾಡಿದ?’

‘ರೈತನು ಕಾಳುಗಳನ್ನು ಒಂದು ದೊಡ್ಡದಾದ ಮಡಿಕೆಯಲ್ಲಿ ತುಂಬಿಸಿ, ಅದರ ಬಾಯಿಯನ್ನು ಒಂದು ದಪ್ಪವಾದ ಬಟ್ಟೆಯಲ್ಲಿ ಕಟ್ಟಿದನು’.

‘ಅನಂತರ ಏನಾಯ್ತು?’

‘ಆಗ ಹಕ್ಕಿಗಳು ಇಲಿಯೊಂದರ ಸ್ನೇಹವನ್ನು ಬೆಳೆಸಿ, ಆ ಬಟ್ಟೆಯನ್ನು ಕತ್ತರಿಸಲು ಹೇಳಿದವು’.

‘ಮುಂದೆ ಏನಾಯಿತು’?

‘ಅಲ್ಲಿರುವ ಕಾಳುಗಳನ್ನು ನೋಡಿ ಸಾವಿರಾರು ಹಕ್ಕಿಗಳು ಒಂದಾದ ಮೇಲೊಂದರಂತೆ ಹಾರಿ ಬಂದವು. ಅವುಗಳಲ್ಲಿ ಮೊದಲನೆಯ ಹಕ್ಕಿಯು ಹಾರಿ ಬಂದು ಒಂದು ಕಾಳನ್ನು ಕಚ್ಚಿಕೊಂಡು ರಕ್ಕೆಯನ್ನು ಬಡಿಯುತ್ತಾ ಹಾರಿ

